

# ತೀಕ್ಷ್ಣ ಕಣ್ಣಿನ ಹೊಂಚುಗಾರ ಕಾಡುಬೆಕ್ಕಿನ ಜೇಡ

ಕಾಡುಬೆಕ್ಕಿನಂತೆ ಹೊಂಚು ಹಾಕಿ, ನಿಧಾನವಾಗಿ ಹಿಂಬಾಲಿಸಿ ತನ್ನ ಬೇಟೆಯನ್ನು ಹಿಡಿಯುವ ರೀತಿಯಿಂದಾಗಿಯೇ ಈ ಜೇಡಕ್ಕೆ 'ಕಾಡುಬೆಕ್ಕಿನ ಜೇಡ' ಎಂಬ ಹೆಸರು.

■ ಜಿ.ಆರ್. ಪಂಡಿತ್, ಸಾಗರ

ಒಂದು ಮುಂಜಾನೆ ಕೈತೋಟದಲ್ಲಿ ಗಿಡಗಳಿಗೆ ನೀರುಣಿಸುತ್ತಿದ್ದೆ. ಇಬ್ಬನಿಯಲ್ಲಿ ತೋಯ್ದು ಗಿಡಬಳ್ಳಿಗಳಲ್ಲಿ ಹೂವು ಅರಳುವ ಸಮಯ. ಪ್ರತಿ ಗಿಡದ ಯೋಗಕ್ಷೇಮ ವಿಚಾರಿಸುತ್ತ ನೀರುಣಿಸುತ್ತಿದ್ದವನ ಕಣ್ಣಿಗೆ ಬಳ್ಳಿಯೊಂದರ ಬಾಗಿನಲ್ಲಿ, ನಿಶ್ಚಲವಾಗಿ ತನ್ನ ಎಂಟು ಕಾಲುಗಳನ್ನು ಅಗಲವಾಗಿ ಊರಿ ಏನನ್ನೋ ತದೇಕಚಿತ್ತದಿಂದ ನೋಡುತ್ತಿದ್ದ ಜೇಡವೊಂದು ಕಣ್ಣಿಗೆ ಬಿತ್ತು.

ಹಳದಿ ಕೆಂಪಿನ ಬಣ್ಣ, ಚಿಕ್ಕದಾದರೂ ಹೊಳೆಯುವ ಕಣ್ಣುಗಳು, ಬಿರುಗೂದಲು ಹೊಂದಿದ ಉದ್ದನೆಯ ಕಾಲುಗಳು. ಇದು 'ಲಿಂಕ್ಸ್ ಸ್ಪೈಡರ್' ಎಂದು ಖಚಿತವಾಗುತ್ತಿದ್ದಂತೆ ನೀರು ಹನಿಸುವುದನ್ನು ನಿಲ್ಲಿಸಿ ಕ್ಯಾಮೆರಾ ಹಿಡಿದು ಒಂದಿಷ್ಟು ಚಿತ್ರಗಳನ್ನು ಕ್ಲಿಕ್ಕಿಸಿದೆ. ಇಬ್ಬನಿಯಲ್ಲಿ ತೋಯ್ದು ಜೇಡ ಅಲ್ಲಾಡದೇ ಹಾಗೇ ಕುಳಿತು ಸಹಕರಿಸಿತ್ತು.

ಈ 'ಲಿಂಕ್ಸ್ ಸ್ಪೈಡರ್'ಗಳು 'ಆಕ್ಸಿಯೋಪಿಡೆ' ಕುಟುಂಬದ ಒಂದು ಪ್ರಭೇದ. ಸಾಮಾನ್ಯವಾಗಿ ಈ ಜೇಡಗಳು ಹುಲ್ಲುಗಾವಲಿನಿಂದ ಹಿಡಿದು ನಮ್ಮ ನಿಮ್ಮ ಮನೆಯ ಕೈತೋಟದವರೆಗಿನ ವ್ಯಾಪಕ ಪರಿಸರದಲ್ಲಿ ಕಂಡುಬರುತ್ತವೆ. ಉದ್ಯಾನವನ, ಹೊಲ, ಕಾಡುಗಳೂ ಸೇರಿದಂತೆ ವಿವಿಧ ಪರಿಸರದಲ್ಲಿ ಎಲೆಗಳು ಮತ್ತು ಹೂವುಗಳ ಮೇಲೆ ಹೆಚ್ಚಾಗಿ ಕಂಡುಬರುತ್ತವೆ. ಅಂಟಾರ್ಟಿಕಾ ಹೊರತುಪಡಿಸಿ ಉಳಿದೆಲ್ಲ ಭೂ ಖಂಡಗಳಲ್ಲಿಯೂ ಇವುಗಳನ್ನು ಕಾಣಬಹುದು.

ಲಿಂಕ್ಸ್ ಎಂದರೆ ತೀಕ್ಷ್ಣ ದೃಷ್ಟಿಯ ಕಾಡುಬೆಕ್ಕು. ಕಾಡುಬೆಕ್ಕಿನಂತೆ ಹೊಂಚುಹಾಕಿ, ನಿಧಾನವಾಗಿ ಹಿಂಬಾಲಿಸಿ ತನ್ನ ಬೇಟೆಯನ್ನು ಹಿಡಿಯುವ ರೀತಿಯಿಂದಾಗಿಯೇ ಈ ಜೇಡವನ್ನು 'ಕಾಡುಬೆಕ್ಕಿನ ಜೇಡ' ಅಥವಾ 'ಲಿಂಕ್ಸ್ ಸ್ಪೈಡರ್' ಎಂದು ಕರೆಯುತ್ತಾರೆ. ಇವು ಸಾಮಾನ್ಯ ಜೇಡಗಳಂತೆ ಆಹಾರ ಬೇಟೆಯಾಡಲು ಬಲೆ ನೇಯುವುದಿಲ್ಲ. ಸಸ್ಯದ ಎಲೆ, ಕಾಂಡ ಅಥವಾ ತೊಗಟೆ ಹಿಂದೆ ಮರೆಮಾಚಿ ಕುಳಿತು, ಎಲೆ ಮತ್ತು ಹೂವಿಗೆ ಬರುವ ಕೀಟಗಳನ್ನು ಸುಲಭವಾಗಿ ಬೇಟೆಯಾಡುತ್ತವೆ. ತಮ್ಮ ಕ್ಷಿಪ್ರ ಚಲನೆ ಮತ್ತು ಜಿಗಿಯುವ ಸಾಮರ್ಥ್ಯದಿಂದ ಬೇಟೆಯೆಡೆಗೆ ಸರಾಗವಾಗಿ ಧಾವಿಸುತ್ತವೆ. ಬಿರುಗೂದಲುಗಳನ್ನು ಹೊಂದಿರುವ, ಉದ್ದನೆಯ ಎಂಟು ಕಾಲುಗಳನ್ನು ಬಳಸಿ ಬುಟ್ಟಿಯಂಥ ರಚನೆ ರೂಪಿಸಿ ತನ್ನ ಬೇಟೆ ಹಿಡಿದು ಕಟ್ಟಿಹಾಕುವ ಚಾಕಚಕ್ಯತೆ ಹೊಂದಿದೆ.

ಉದ್ದನೆಯ ಕಾಲುಗಳು ಪರಭಕ್ಷಕಗಳಿಂದ ತಪ್ಪಿಸಿಕೊಳ್ಳಲೂ ಸಹಾಯ ಮಾಡುತ್ತವೆ. ಸಾಮಾನ್ಯವಾಗಿ ಹಗಲಿನಲ್ಲಿ ಬೇಟೆಯಾಡುವ ಈ ಜೇಡ ತನ್ನ ವೇಗ, ಚುರುಕುತನ ಮತ್ತು ತೀಕ್ಷ್ಣ ದೃಷ್ಟಿ ಬಳಸಿ ನಿಖರವಾಗಿ ದಾಳಿಯಿಡುವ ಆಕ್ರಮಣಕಾರಿ ಬೇಟೆಗಾರ. ನೊಣ, ಸೊಳ್ಳೆ, ಇತರ ಜೇಡಗಳು, ಪತಂಗಗಳಂತಹ ಪರಾಗ ಸ್ಪರ್ಶಕಗಳು ಇದರ ಆಹಾರ. ಸಿಕ್ಕ ಕೀಟವನ್ನು ತನ್ನ ವಿಷಪೂರಿತ ಹಲ್ಲುಗಳಿಂದ ಕಚ್ಚಿ ನಿಷ್ಕ್ರಿಯಗೊಳಿಸುತ್ತದೆ.

ಇದರ ಕಣ್ಣಿನ ವ್ಯವಸ್ಥೆಯೂ ವಿಶಿಷ್ಟ. ಒಟ್ಟು ಎಂಟು ಕಣ್ಣುಗಳು. ಮುಖದ ಮೇಲೆ ಷಡ್ಭುಜಾಕೃತಿಯಲ್ಲಿ ಆರು ಚಿಕ್ಕ ಕಣ್ಣುಗಳನ್ನು ಹೊಂದಿದ್ದು, ಸ್ವಲ್ಪ ದೊಡ್ಡದಾದ ಎರಡು ಕಣ್ಣುಗಳು ಮುಖದ ಮಧ್ಯಭಾಗದಲ್ಲಿವೆ. ಈ ಕಣ್ಣುಗಳು ದೂರದಿಂದಲೇ ತನ್ನ ಬೇಟೆಯನ್ನು ಗುರುತಿಸಲು ಸಶಕ್ತವಾಗಿವೆ.



ಲಿಂಕ್ಸ್ ಜೇಡಗಳ ಸಂತಾನೋತ್ಪತ್ತಿ ಪ್ರಕ್ರಿಯೆ ಹಲವು ರೀತಿಯ ಪ್ರಣಯ ಕ್ರಮಗಳನ್ನು ಒಳಗೊಂಡಿದೆ. ಗಂಡು ಜೇಡ ಹೆಣ್ಣು ಜೇಡವನ್ನು ಆಕರ್ಷಿಸಲು ನಿರ್ದಿಷ್ಟ ಚಲನೆ ಮಾಡುತ್ತದೆ. ಹೆಣ್ಣು ಜೇಡ ಒಪ್ಪಿದರೆ ಸಂಯೋಗ. ನಂತರ ಹೆಣ್ಣು ಜೇಡ ಮೊಟ್ಟೆ ಇಟ್ಟು ಅವುಗಳನ್ನು ರಕ್ಷಿಸಲು ಅದರ ಸುತ್ತ ರೇಷ್ಮೆಯ ನೂಲಿನಂಥ ಪಾರದರ್ಶಕ ಬಲೆ ನೇಯುತ್ತದೆ. ಮೊಟ್ಟೆ ಒಡೆದು ಮರಿಗಳು ಹೊರಬರುವವರೆಗೂ ಅವುಗಳ ರಕ್ಷಣೆ ಮಾಡುತ್ತದೆ. ಪರಭಕ್ಷಕ ಅಥವಾ ಮಾನವರಂತಹ ದೊಡ್ಡ ಜೀವಿಗಳನ್ನು ಕಂಡಾಗ ಓಡಿ ಹೋಗುವುದಾದರೂ, ತನ್ನ ಮೊಟ್ಟೆ ಚೀಲ ರಕ್ಷಿಸಿಕೊಳ್ಳುವ ಸಮಯದಲ್ಲಿ ಮಾತ್ರ ಆ ಜಾಗದಿಂದ ಕದಲುವುದಿಲ್ಲ. ಮನುಷ್ಯರೂ ಸೇರಿದಂತೆ ಒಳನುಗ್ಗುವವರ ಮೇಲೆ ತನ್ನ ಕೋರೆಹಲ್ಲುಗಳಿಂದ ಅರ್ಧ ಅಡಿ ದೂರದವರೆಗೂ ವಿಷ ಉಗುಳಿ ಮೊಟ್ಟೆಯ ಚೀಲಗಳನ್ನು ರಕ್ಷಿಸಿಕೊಳ್ಳುತ್ತದೆ. ಈ ವಿಷ ತೀರಾ ಅಪಾಯಕಾರಿ ಅಲ್ಲದಿದ್ದರೂ ಚರ್ಮದಲ್ಲಿ ತುರಿಕೆ ಉಂಟಾಗಿ ಕಿರಿಕಿರಿ ಮಾಡಬಲ್ಲವು.

ಈ ಜೇಡ ಕೃಷಿಗೆ ಮಾರಕವಾಗಬಹುದಾದ ಕೀಟಗಳನ್ನು ತಿನ್ನುವುದರಿಂದ ಜೈವಿಕ ನಿಯಂತ್ರಣ ಸಾಧಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಹಾಗೆಯೇ ಪರಾಗ ಸ್ಪರ್ಶಕಗಳನ್ನು ತಿನ್ನುವುದರಿಂದ ಕೃಷಿ ವ್ಯವಸ್ಥೆಗೆ ಅಪಾಯಕಾರಿಯೂ ಹೌದು. ಆದರೂ ಈ ಜೇಡಗಳ ಉಪಸ್ಥಿತಿ ಪರಿಸರ ಆರೋಗ್ಯದ ಸಕಾರಾತ್ಮಕ ಸಂಕೇತ. ■